# ಕೀಲಿ ಉತ್ತರ

**ತರಗತಿ : 9** **ವಿಷಯ : ದ್ವಿತೀಯ ಭಾಷೆ ಕನ್ನಡ** **9/10**

| ಪ್ರಶ್ನೆ ಸಂಖ್ಯೆ | ಉತ್ತರದ ವಿವರ | ಅಂಕ ವಿಂಗಡಣೆ |
|---|---|---|
| **I.** | **ಬಹು ಆಯ್ಕೆ ಪ್ರಶ್ನೆ : (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ.)** | **(4×1=4)** |
| 1. | B ಅಂಕಿತನಾಮ | |
| 2. | A ಅನ್ನು | |
| 3. | D ವರ್ತಮಾನ ಕಾಲ | |
| 4. | C ಅನುಕರಣಾವ್ಯಯ | |
| **II.** | **ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ : (ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ)** | **(12×1=12)** |
| 5. | ಕುವೆಂಪು ಅವರನ್ನು ಮನೆಯವರೆಲ್ಲಾ ಅಣ್ಣ ಎಂದು ಕರೆಯುತ್ತಿದ್ದರು | |
| 6. | ಆಶ್ರಮದ ಸ್ವಾಮಿಗಳ ಹೆಸರು ಸಿದ್ಧೇಶ್ವರಾನಂದರು | |
| 7. | ಭಿಕ್ಷುಕರಿಗೆ ಬಿಕ್ಷೆ ಹಾಕುವುದು ಅವರನ್ನು ಪ್ರೋತ್ಸಾಹಿಸಿದ ಹಾಗೆ ಎಂದು ಕುವೆಂಪು ಬಿಕ್ಷೆ ಹಾಕುವುದನ್ನು ವಿರೋಧಿಸುತ್ತಿದ್ದರು | |
| 8. | ಸಿದ್ದೇಶ್ವರಾನಂದರು ಭಿಕ್ಷಾವೃತ್ತಿಗೆ ಉತ್ತೇಜನ ನೀಡುವುದಕ್ಕೆ ಬದ್ಧ ವಿರೋಧಿಗಳಾಗಿದ್ದರು | |
| 9. | ಶಂತನು ಹಸ್ತಿನಾಪುರದ ರಾಜನಾಗಿದ್ದನು | |
| 10. | ಶಂತನು ಧರ್ಮಾತ್ಮನೆಂದೂ, ಸತ್ಯವಂತನೆಂದೂ ಹೆಸರಾಗಿದ್ದನು | |
| 11. | ಭೀಷ್ಮನು ನಡೆನುಡಿಗಳಲ್ಲಿ ತಂದೆಯಾದ ಶಂತನನ್ನು ಹೋಲುತ್ತಿದ್ದನು | |
| 12. | ಚಿಕ್ಕಾ ಗ ಚೆಲುವ ಚಂದ್ರಾಮ | |
| 13. | ಮಾರುದ್ದ ಪೈರಾಗಿ, ಮೊಳದುದ್ದ ತೆನೆಯಾಗಿ ಉತ್ತಮ ಬೆಳೆ ಬಂದಾಗ ಬಡವನ ಮನೆಗೆ ಸಿರಿವಂತಿಗೆ ಬರುತ್ತದೆ. | |
| 14. | ಜನಪದರು ಕಂದವ್ವ (ಮಕ್ಕಳ) ಹಸಿವು ಇಂಗೋಗ್ಲಿ ಎಂದು ಹೇಳಿದ್ದಾರೆ. | |
| 15. | ನಾಲಿಗೆ ನೀಚಬುದ್ಧಿಯನ್ನು ಬಿಡಬೇಕೆಂದು ಪುರಂದರದಾಸರು ಹೇಳಿದ್ದಾರೆ. | |
| 16. | ಪುರಂದರದಾಸರು ಇದ್ದ ಮಾತನಾಡು ಎಂದು ನಾಲಗೆಗೆ ಹೇಳಿದ್ದಾರೆ. | |
| **III.** | **ಮೂರು-ನಾಲ್ಕು ವಾಕ್ಯಗಳ ಉತ್ತರ ಬರೆಯುವುದು : (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕಗಳು)** | **(8×2=16)** |
| 17. | ಆನೆ ಮರಿ ಗೀತಾಳಿಗೆ ಬೇಕಂತಲೇ ತನ್ನ ಸೊಂಡಿಲಿನಿಂದ ತುರುಬನ್ನು ಎಳೆಯುವುದು ಒಣಗಲು ಹಾಕಿದ ಬಟ್ಟೆಗಳ ಮೇಲೆ ತನ್ನ ಪಾದದ ಚಿತ್ರ ಬಿಡಿಸುವುದು. ಆನೆ ಮರಿ ಎಂಬುದನ್ನು ಮರೆತು ವಿಧೇಯ ಮಗುವಿನಂತೆ ಅಳುವುದು ಇವು ಆನೆ ಮರಿ ಮಾಡುತ್ತಿದ್ದ ಕೀಟಲೆಗಳು. | |
| 18. | ''ಡಿ.ಎಲ್.ಎನ್. ಎಂದರೆ ಪಾಂಡಿತ್ಯ. ಪಾಂಡಿತ್ಯವೆಂದರೆ ಡಿ.ಎಲ್.ಎನ್. ಹಳಗನ್ನಡ ಭಾಷೆ ಸಾಹಿತ್ಯದ ವಿಷಯಕ್ಕಂತೂ ಹಲವರು ಹೇಳುವಂತೆ ನಾನೂ ಬಲ್ಲಂತೆ ಅವರೊಂದು ಜಂಗಮ ಬೃಹತ್ಕೋಶ ! ಹಳಗನ್ನಡದಲ್ಲಿ ಅವರಿಗಿಂತ ನಿಷ್ಣಾತರಾದ ವಿದ್ವಾಂಸರನ್ನು ಸದ್ಯದಲ್ಲಿ ಕಾಣುವುದು ಅಶಕ್ಯವೆಂದೇ ನನ್ನ ಭಾವನೆ'' ಎಂದು ತೀ. ನಂ. ಶ್ರೀ ಅವರು''ಡಿ.ಎಲ್.ಎನ್. ಪಾಂಡಿತ್ಯದ ಬಗ್ಗೆ ಹೇಳಿದ್ದಾರೆ. | |
| 19. | ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಪೀಠಕ್ಕೇರುವವರನ್ನು ಸಿದ್ಧಗೊಳಿಸಿದರು. 11 ಗ್ರಂಥ, 7 ಮುನ್ನುಡಿ, 12 ವಿಮರ್ಶಾ ಲೇಖನ, 70 ಇತರ ಲೇಖನ ಇವರ ಸಾಹಿತ್ಯ ಸಂಪತ್ತು . ಇವರ ಸಾಹಿತ್ಯ ಕೃಷಿ ಮೊತ್ತದಲ್ಲಿ ಕಡಿಮೆ ಎನಿಸಿದರೂ, ಸತ್ತ್ವದಲ್ಲಿ ಹಿರಿದಾಗಿತ್ತು . | |
| 20. | ಶಬರಿ, ರಾಮನ ಸಹಚರ್ಯದಲ್ಲಿ ಅವನನ್ನು ನೇವರಿಸಿದಳು. ರಾಮನ ಮೈಮನಸ್ಸುಗಳನ್ನು ತನ್ನ ಪ್ರೀತಿಯ ಕೈಗಳಿಂದ ನೀವಿದಳು. ಬೆಳಗಿನ ವೇಳೆ ಹುಲ್ಲಿನ ಮೇಲಿನ ಮಂಜಿನ ಹನಿಗಳು ಇಳಿದಂತೆ ಅವಳ ಕಣ್ಣುಗಳಿಂದ ಆನಂದಭಾಷ್ಪ ಇಳಿದವು. ಹೀಗೆ ಶಬರಿ ಭಾವುಕಳಾದಳು. | |
| 21. | ರಾಮನಿಗಾಗಿ ಕಾದಿದ್ದ ಶಬರಿಯು ರಾಮ ಬಂದಾಗ ಹಣ್ಣಿನ ಬುಟ್ಟಿಯನ್ನು ಎತ್ತಿಕೊಂಡು ಬಂದಳು. ಅವುಗಳಲ್ಲಿ ಉತ್ತಮ ಹಣ್ಣುಗಳನ್ನು ಆರಿಸಿಕೊಂಡು ಹಣ್ಣುಗಳನ್ನು ಕಚ್ಚಿನೋಡಿ, ರುಚಿಯಾಗಿರುವುದನ್ನು ತಿನ್ನು ಎನ್ನುತ್ತ ರಾಮನಿಗೆ ಕೊಟ್ಟಳು ಹೀಗೆ ಶಬರಿ ರಾಮನನ್ನು ಉಪಚರಿಸಿದಳು. | |



**P.T.O.**

| ಪ್ರಶ್ನೆ ಸಂಖ್ಯೆ | ಉತ್ತರದ ವಿವರ | ಅಂಕ ವಿಂಗಡಣೆ |
|---|---|---|
| 22. | ಮರದಲ್ಲಿ ಬೆಂಕಿಯನ್ನು ಉರಿಯದಂತೆ ಭಗವಂತ ಇರಿಸಿದ್ದಾನೆ. ಹಾಲಿನಲ್ಲಿ ತುಪ್ಪದ ಕಂಪು ಬಾರದಂತೆ ಇರಿಸಿದ್ದಾನೆ. ಹೀಗೆ, ಶರೀರದಲ್ಲಿ ಆತ್ಮವನ್ನು ಯಾರಿಗೂ ಕಾಣದಂತೆ ಭಗವಂತನು ನಾವು ಬೆರಗಾಗುವಂತೆ ಬರೆಸಿದ್ದಾನೆ. | |
| 23. | ಪ್ರತಿಯೊಂದು ಮಗುವೂ ಹುಟ್ಟುತ್ತಲೇ ವಿಶ್ವಮಾನವ. ಬೆಳೆಯುತ್ತಾ ನಾವು ಅದನ್ನು 'ಅಲ್ಪ ಮಾನವ'ನನ್ನಾಗಿ ಮಾಡುತ್ತೇವೆ ಮತ್ತೆ ಅವನನ್ನು 'ವಿಶ್ವಮಾನವ'ನನ್ನಾಗಿ ಮಾಡುವುದೇ ವಿದ್ಯೆಯ ಕರ್ತವ್ಯವಾಗಬೇಕು. | |
| 24. | ನೀರಿಗೆ ಕೊಳಚೆ ನೀರು ಸೇರದಂತೆ ನೋಡಿಕೊಳ್ಳಬೇಕು. ಮಳೆ ನೀರನ್ನು ಸಂಗ್ರಹಿಸಿ ಇಂಗುವಂತೆ ಮಾಡಬೇಕು. ನೀರಿನ ಮೂಲ ಉಳಿಸಬೇಕು. ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ ಗಿಡ ಮರ ಬೆಳೆಸಬೇಕು. ಇವು ನಾನು ಅನುಸರಿಸಬೇಕಾದ ಕ್ರಮಗಳಾಗಿವೆ. | |
| **IV.** | **ಕವಿ/ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು /ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು.**<br>**ಜನ್ಮಸ್ಥಳ, ಕಾಲ, 1 ಅಂಕ**<br>**ಕೃತಿಗಳು, ಪ್ರಶಸ್ತಿ 1 ಅಂಕ**<br>**ವಾಕ್ಯರೂಪದಲ್ಲಿ ಬರೆಯುವುದು, ಭಾಷಾ ಶೈಲಿಗೆ 1 ಅಂಕ**<br>**ಒಟ್ಟು 3 ಅಂಕಗಳು** | **(1×3=3)** |
| 25. | ಕುವೆಂಪುರವರು ಶಿವಮೊಗ್ಗ ಜಿಲ್ಲೆಯ ಕುಪ್ಪಳ್ಳಿಯಲ್ಲಿ 1904 ಡಿಸೆಂಬರ್ 29ರಂದು ಜನಿಸಿದರು. ಇವರು 'ಶ್ರೀರಾಮಾಯಣದರ್ಶನಂ', 'ಕೊಳಲು', 'ಪಾಂಚಜನ್ಯ', 'ನವಿಲು', 'ಕಲಾಸುಂದರಿ', 'ಕೃತ್ತಿಗೆ' 'ಅಗ್ನಿಹಂಸ', 'ಪಕ್ಷಿಕಾಶಿ', 'ಷೋಡಸಿ', 'ಅನಿಕೇತನ', 'ಕಾನೂರು ಸುಬ್ಬಮ್ಮ ಹೆಗ್ಗಡತಿ', 'ಮಲೆಗಳಲ್ಲಿ ಮದುಮಗಳು' ಮುಂತಾದ ಕೃತಿಗಳನ್ನು ರಚಿಸಿದ್ದಾರೆ. 'ಕರ್ನಾಟಕ ರತ್ನ' 'ಪಂಪ ಪ್ರಶಸ್ತಿ', ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ', 'ಪದ್ಮಭೂಷಣ' 'ಪದ್ಮ ವಿಭೂಷಣ' ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. | |
| **V.** | ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯುವುದು :<br>ಪಠ್ಯಾಂಶಕ್ಕೆ **2** ಅಂಕಗಳು<br>ಪದಬಳಕೆ ಮತ್ತು ಶೈಲಿ **1** ಅಂಕ<br>ಒಟ್ಟು **3** ಅಂಕಗಳು | **(1×3=3)** |
| 26. | ಈ ಪದ್ಯಭಾಗವನ್ನು ಜೇಡರ ದಾಸಿಮಯ್ಯ ಇವರು ರಚಿಸಿದ್ದು, 'ಸಂಕೀರ್ಣ ವಚನ ಸಂಪುಟ – ೨' ಕೃತಿಯ ವಚನಗಳು ಪದ್ಯದಿಂದ ಆರಿಸಿಕೊಳ್ಳಲಾಗಿದೆ.<br>ಶರಣರ ಒಳ್ಳೆಯ ನುಡಿಯ ಮಹತ್ವವನ್ನು ಇಲ್ಲಿ ಹೇಳಲಾಗಿದೆ. ಆನೆ ಕೊಟ್ಟರೂ ಬೇಡ ಸಿರಿಸಂಪತ್ತು ಕೊಟ್ಟರೂ ಬೇಡ. ಹಿರಿದಾದ ರಾಜ್ಯ ಕೊಟ್ಟರೂ ಬೇಡ ಆದರೆ ಶಿವಶರಣರ ಒಳ್ಳೆಯ ನುಡಿಗಳನ್ನು ಸ್ವಲ್ಪ ಹೊತ್ತು ನೀಡಿದರೆ ನಿನ್ನನ್ನು ಕಂಡಷ್ಟು ಸಂತಸವಾಗುತ್ತದೆ ಎಂದು ಜೇಡರ ದಾಸಿಮಯ್ಯನವರ ಶಿವಭಕ್ತಿ ಇಲ್ಲಿ ಬಿಂಬಿತವಾಗಿದೆ. | |
| **VI.** | ಕೊಟ್ಟಿರುವ ಚಿತ್ರಗಮನಿಸಿ, ಅಲಂಕಾರಿಕವಾಗಿ ವರ್ಣನೆ ಮಾಡುವುದು :<br>ಹೋಲಿಕೆ **1** ಅಂಕ<br>ಗೀತಾಳ ತಾಯ್ತನದ ಅಲಂಕಾರಿಕ ವರ್ಣನೆ **2** ಅಂಕ<br>ಒಟ್ಟು **3** ಅಂಕಗಳು | **(1×3=3)** |
| 27. | ಗೀತಾ ಆನೆಯನ್ನು ಮಗನಂತೆ ಸಾಕುತ್ತಿದ್ದಾಳೆ. ಆನೆ ಮಗನಿಗೆ ಹಸುವಿನ ಹಾಲು ಕಾಯಿಸಿ ಕುಡಿಸುತ್ತಾಳೆ. ಅದರ ಕಕ್ಕ ಬಳಿಯುತ್ತಾಳೆ. ಹಗಲೂ ರಾತ್ರಿ ಆನೆ ಮಗ ಶಿವನ ಚಲನವಲನ ಗಮನಿಸುತ್ತಿರುತ್ತಾಳೆ. ಅದು ಮುಗ್ಗರಿಸಿದರೆ ಇವಳ ಕರುಳು ದಸಕ್ಕೆನ್ನುತ್ತದೆ. ಸೊಂಡಿಲನ್ನು ಮಣ್ಣು ಮಾಡಿಕೊಂಡರೆ ಬೈದು ಶುಚಿ ಮಾಡುತ್ತಾಳೆ. ಸ್ನಾನ ಮಾಡಿಸುತ್ತಾಳೆ, ಬೈದು ಮರುಗುತ್ತಾಳೆ. ಹೀಗೆ ಗೀತ ತನ್ನ ಮಗನಂತೆ, ಆನೆ ಮಗನನ್ನು ತಾಯ್ತನದಿಂದ ನೋಡಿಕೊಳ್ಳುತ್ತಾಳೆ. | |
| **VII.** | ಗಾದೆಯನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)<br>ಗಾದೆಯ ಮಹತ್ವದ ವಿವರಣೆ **1** ಅಂಕ<br>ಉದಾಹರಣೆಯೊಂದಿಗೆ ಅರ್ಥ ವಿವರಣೆ **1** ಅಂಕ<br>ಭಾಷಾ ಶೈಲಿಗೆ – ಪದಬಂಧಗಳಿಗೆ **1** ಅಂಕ<br>ಒಟ್ಟು **3** ಅಂಕಗಳು | **(1×3=3)** |
| 28. | ಕೈ ಕೆಸರಾದರೆ ಬಾಯಿ ಮೊಸರು.<br>**ಅಥವಾ**<br>ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ. | |

| ಪ್ರಶ್ನೆ ಸಂಖ್ಯೆ | ಉತ್ತರದ ವಿವರ | ಅಂಕ ವಿಂಗಡಣೆ |
|---|---|---|
| **VIII.** | ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :<br>ಕೃತಿ, ಕರ್ತೃ ಮತ್ತು ಪಠ್ಯದ ಹೆಸರು **1** ಅಂಕ, ಯಾರು – ಯಾರಿಗೆ, ಸಂದರ್ಭ **1** ಅಂಕ,<br>ಭಾಷಾಶೈಲಿ, ಪದಬಂಧಗಳಿಗೆ **1** ಅಂಕ, ಒಟ್ಟು **3** ಅಂಕಗಳು | **(5×3=15)** |
| 29. | ''ಇವುಗಳನ್ನು ಯಜಮಾನರಿಗೆ ತಲುಪಿಸಿ ಬಿಡಿ''<br>ಈ ವಾಕ್ಯವನ್ನು ಡಾ. ಬಿ.ಜಿ. ಎಲ್. ಸ್ವಾಮಿಯವರು ಬರೆದ 'ಹಸುರು ಹೊನ್ನು' ಪುಸ್ತಕದ 'ಅರಳಿಕಟ್ಟೆ' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ. ಈ ಮಾತನ್ನು ಶೇಷಪ್ಪನವರು ಬಿ.ಜಿ.ಎಲ್. ಸ್ವಾಮಿಯವರ ಸೋದರತ್ತೆಗೆ ಹೇಳಿದರು. ಶೇಷಪ್ಪನವರು ತಾಮ್ರದ ಪಂಚಪಾತ್ರೆ , ಉದ್ಧರಣೆ, ಬಾಳೆಹಣ್ಣು, ಹೂ ಸೋದರತ್ತೆ ಕೈಲಿಟ್ಟು ಆ ಸಂದರ್ಭದಲ್ಲಿ ಇವುಗಳನ್ನು ಯಜಮಾನರಿಗೆ ತಲುಪಿಸಿಬಿಡಿ ಎಂದು ಹೇಳಿದರು. ಈ ಮಾತಿನಲ್ಲಿ ಶೇಷಪ್ಪನವರ ಕೃತಜ್ಞತೆ, ಜವಾಬ್ದಾರಿಗಳು ಸುಂದರವಾಗಿ, ಸ್ವಾರಸ್ಯಕರವಾಗಿ ವ್ಯಕ್ತವಾಗಿದೆ. | |
| 30. | ''ಚಿನ್ನಕ್ಕೆ ಕುಂದಣ ಕೂಡಿಸಿದಂತಾಗುತ್ತದೆ''<br>ಈ ವಾಕ್ಯವನ್ನು ದಸ್ತಗೀರ ಅಲ್ಲೀಭಾಯಿ ಅವರು ಬರೆದ 'ಮುಸ್ಲೀಮರ ಹಬ್ಬ ಮತ್ತು ಉರುಸುಗಳು' ಪುಸ್ತಕದ 'ಉರುಸುಗಳಲ್ಲಿ ಭಾವೈಕ್ಯತೆ ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.<br>ಈ ಮಾತನ್ನು ಲೇಖಕರು ಹೇಳಿದ್ದಾರೆ. ಭಾರತದ ಪಾಲಿಗೆ ಹಿಂದು–ಮುಸ್ಲೀಮರನ್ನು ಒಂದು ಗೂಡಿಸುವುದು ಭಾರತದ ಪಾಲಿಗೆ ಆದರ್ಶ. ಹೀಗಾದರೆ ಚಿನ್ನಕ್ಕೆ ಕುಂದಣ ಕೂಡಿಸಿದಂತಾಗುತ್ತದೆ. ಎಂದು ಸಾಂದರ್ಭಿಕ ಹೇಳಿದ್ದಾರೆ ಈ ಮಾತಿನಲ್ಲಿ ಭಾವೈಕ್ಯತೆ ಸ್ವಾರಸ್ಯಕರವಾಗಿ ವ್ಯಕ್ತವಾಗಿದೆ. | |
| 31. | 'ಧರ್ಮವಿಲ್ಲದ ವಿಜ್ಞಾನ ಕುಂಟು ಮತ್ತು ವಿಜ್ಞಾನವಿಲ್ಲದ ಧರ್ಮ ಕುರುಡು<br>ಈ ವಾಕ್ಯವನ್ನು ಡಾ. ಎಚ್. ನರಸಿಂಹಯ್ಯ ಅವರು ಬರೆದ 'ತೆರೆದ ಮನ' ಪುಸ್ತಕದ 'ಐನ್‌ಸ್ಟೀನ್ ಮತ್ತು ದೇವರು' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.<br>ಈ ಮಾತನ್ನು ಲೇಖಕರು ಐನ್‌ಸ್ಟೀನ್‌ರವರ ಕುರಿತು ಹೇಳುವ ಮಾತನ್ನು ಉಲ್ಲೇಖಿಸಿ ಹೇಳಿದ್ದಾರೆ. ಐನ್‌ಸ್ಟೀನ್ ಅವರು ಆಳವಾದ ಧಾರ್ಮಿಕ ನಂಬಿಕೆಗಳಿದ್ದ ವ್ಯಕ್ತಿಯೆನ್ನುವುದನ್ನು ಸ್ಥಾಪಿಸಲು ಪದೇ ಪದೇ ಉದ್ಧರಿಸಲಾಗುವ ಈ ಮಾತನ್ನು ಸಾಂದರ್ಭಿಕವಾಗಿ ಹೇಳಿದ್ದಾರೆ. ಈ ಮಾತಿನಲ್ಲಿ ಪ್ರಸಿದ್ಧ ವ್ಯಕ್ತಿಗಳ ಮಾತಿನ ಗೂಡಾರ್ಥ ಸ್ವಾರಸ್ಯಕರವಾಗಿ ವ್ಯಕ್ತವಾಗಿದೆ. | |
| 32. | ''ಅಟ್ಟ ನೋಡದೆ ಬೆಟ್ಟ ಹತ್ತುತ್ತೇನೆ''<br>ಈ ವಾಕ್ಯವನ್ನು ಡಾ.ಎಲ್. ಹನುಮಂತಯ್ಯ ಅವರು ಬರೆದ 'ಅವ್ವನ ಕವಿತೆ' ಪುಸ್ತಕದ 'ಅಟ್ಟ ಹತ್ತಬೇಡ' ಎಂಬ ಪದ್ಯದಿಂದ ಆರಿಸಲಾಗಿದೆ.<br>ಈ ಮಾತನ್ನು ಮಗ ಹೇಳುತ್ತಾನೆ. ಅಟ್ಟ ಹತ್ತಬೇಡ ಎಂದಾಗ ಮಗ ಅದಕ್ಕೂ ಎತ್ತರವಾದ ಬೆಟ್ಟ ಹತ್ತುತ್ತೇನೆ. ಎಂಬ ಮಾತನ್ನು ಹೇಳುತ್ತಾನೆ. ಅಟ್ಟ ನೋಡದೆ ಬೆಟ್ಟ ಹತ್ತುತ್ತೇನೆ ಎಂದು ಹೇಳುವ ಮಾತಿನಲ್ಲಿ ಮಕ್ಕಳ ಕುತೂಹಲ, ಸಾಹಸ ಪ್ರವೃತ್ತಿ ತುಂಬಾ ಸ್ವಾರಸ್ಯಕರವಾಗಿ ಅಭಿವ್ಯಕ್ತಗೊಂಡಿದೆ. | |
| 33. | ''ಎಲ್ಲಕ್ಕಿಂತ ನಮ್ಮ ಮನೆಯ ತೊಟ್ಟಲಿನ ತೊದಲು ಚೆಂದ''<br>ಈ ವಾಕ್ಯವನ್ನು ವೈದೇಹಿ ಅವರು ಬರೆದ 'ಹೂವ ಕಟ್ಟುವ ಕಾಯಕ ಪುಸ್ತಕದ 'ತೊಟ್ಟಿಲು ತೂಗುವ ಹಾಡು' ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.<br>ಈ ಮಾತನ್ನು ತಾಯಿಯೊಬ್ಬಳು ಪ್ರಕೃತಿಯನ್ನು ವರ್ಣಿಸುತ್ತಾ ತನ್ನ ಮಗು ಪ್ರಕೃತಿಗಿಂತ ಚೆಂದ ಎಂದು ಜೋಗುಳ ಹಾಡುವ ಸಂದರ್ಭದಲ್ಲಿ ಈ ಮಾತು ಬಂದಿದೆ. ಈ ಮಾತಿನಲ್ಲಿ ಮುಗಿಲು, ಮಳೆ, ಬೆಟ್ಟಗುಡ್ಡ, ಹೂ, ಮೊಟ್ಟೆ ಇವೆಲ್ಲಕ್ಕಿಂತ ಮಗು ಚೆಂದ ಎನ್ನುವಲ್ಲಿ ಮಾತೃವಾತ್ಸಲ್ಯ ಸ್ವಾರಸ್ಯಕರವಾಗಿ ವ್ಯಕ್ತವಾಗಿದೆ. | |
| **IX.** | **ಪದ್ಯಭಾಗ ಪೂರ್ಣಗೊಳಿಸಿ ಬರೆಯುವುದು; (ತಪ್ಪಿಲ್ಲದೆ ಬರೆದ ಪೂರ್ಣಸಾಲುಗಳಿಗೆ ಒಟ್ಟಾರೆ ನಾಲ್ಕು ಅಂಕಗಳು)** | |
| 34. | ಏಳು ಚಿನ್ನ , ಬೆಳಗಾಯ್ತು ಅಣ್ಣ, ಮೂಡಲವು ತೆರೆಯೆ ಕಣ್ಣ, ನಕ್ಷತ್ರ ಜಾರಿ ತಮವೆಲ್ಲ ಸೋರಿ, ಮಿಗಿಲಹುದು ಬಾನ ಬಣ್ಣ, ಜೇನ್ನೊಣದ ಹೆದೆಗೆ ಹೂಬಾಣ ಹೂಡಿ ಝುಂ ಎಂದು ಬಿಟ್ಟ ಮಾರ. ಗುಡಿಗೋಪುರಕ್ಕು ಬಲೆ ಬೀಸಿ ಬಂದ ಅಗೊ ಬೆಳಕು–ಬೇಟೆಗಾರ<br>**ಅಥವಾ**<br>ನಿಶೆಯಿಳಿದ ಉಷೆಯ ಎಳೆನಗೆಯ ಬಗೆಗೆ ಸೋತಿರಲು ಜಗವು ಸವಿಗೆ ಕಣ್ಣೆದಿರು ಬಂದು ಕಟ್ಟಿತ್ತು ಕನಸು; ಕೂಗೊಂದು ಬಂತು ಕಿವಿಗೆ: ಮಕ್ಕಳಿರ ಕೇಳಿ. ರಸ ಕುಡಿಯಲೇಳಿ, ಹುಸಿನಿದ್ದೆಗಿದ್ದೆ ಸಾಕು. ಈ ತುಂಬಿಬಾಳು ತುಂಬಿರುವ ತನಕ ತುಂತುಂಬಿ ಕುಡಿಯಬೇಕು. | |

| ಪ್ರಶ್ನೆ ಸಂಖ್ಯೆ | ಉತ್ತರದ ವಿವರ | ಅಂಕ ವಿಂಗಡಣೆ |
|---|---|---|
| **X.** | **ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :**<br>**ವಿಷಯಾಂಶಕ್ಕೆ 3 ಅಂಕಗಳು, ಭಾಷಾಶೈಲಿ, ಪದಬಳಕೆಗೆ 1 ಅಂಕ, ಒಟ್ಟು 4 ಅಂಕಗಳು** | **(1×4=4)** |
| 35. | ಲೇಖಕರು ಬಸ್ಸು ಪ್ರಯಾಣದಲ್ಲಿ ನಗೆಗೀಡಾದ ಪ್ರಸಂಗ.<br>ರಾತ್ರಿ ಬಸ್ಸಿಳಿದು, ಬೇರೆ ಬಸ್ಸು ಹತ್ತಿ ಗಂಟನ್ನು ಬಸ್ಸಿನಲ್ಲಿಟ್ಟು ಚಹಾ ಕುಡಿಯಲು ಹೋದರು. ಟಿಕೆಟನ್ನು ಪಡೆದರು. ಬಸ್ಸು ಹೊರಡುವಾಗ ಸಂಶಯ ಬಂದು ವಿಚಾರಿಸಿದಾಗ ಅದು ಮತ್ತೆ ಬಂದ ಊರಿಗೆ ಹೋಗುವ ಬಸ್ಸಾಗಿತ್ತು! ಲಗುಬಗೆಯಿಂದ ಬಸ್ ಇಳಿದಾಗ ಎಲ್ಲರೂ ಇವರನ್ನು ನೋಡಿ ಅಪಹಾಸ್ಯದಿಂದ ನೋಡುತ್ತಿದ್ದರು.<br>**ಅಥವಾ**<br>ವೀರೇಂದ್ರ ಸಿಂಪಿಯವರ ಬಸ್ಸು ಪ್ರಯಾಣದ ಸುಖ ದುಃಖ, ಬಸ್ಸಿಗೆ ಕಾಯುವ ಕಷ್ಟ, ಬಂದರೂ ಹೊರಡದಿದ್ದಾಗ ಆಗುವ ದುಃಖ, ಕಿಟಕಿ ಬದಿಯ ಸೀಟು ಸಿಕ್ಕಾಗ ಆಗುವ ಸಂತಸ, ಬಸ್ಸಿನಲ್ಲಿ ಟಿಕೆಟ್ ಮಾಡಿಸಲು ನಡೆಯುವ ಜಗಳ, ಅಕ್ಕಪಕ್ಕ ಕುಳಿತವರೊಂದಿಗಿನ ಮಾತು, ಕರ್ನಾಟಕದ ಬಗ್ಗೆ ಆಡಿದ ಮಾತಿನಿಂದಾದ ಬೇಸರ ಹೆದರಿಕೊಂಡು ಲಾರಿಯಲ್ಲಿ ಪ್ರಯಾಣಿಸಿದ್ದು ಇವೆಲ್ಲವು ಸುಖ ದುಃಖದ ಘಟನೆಗಳಾಗಿದೆ. | |
| **XI.** | ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು :<br>(ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು) | **(1×4=4)**<br>**(2+2)** |
| 36. | ಅ) ಕಣ್ಣು ನೋಡುತ್ತದೆ, ಕಿವಿ ಆಲಿಸುತ್ತದೆ, ಮೂಗು ಆಘ್ರಾಣಿಸುತ್ತದೆ, ಚರ್ಮ ವಸ್ತುವಿನ ಕೋಮಲತೆ ಅರಿಯುತ್ತದೆ, ನಾಲಿಗೆ ರುಚಿ ತಿಳಿಸುತ್ತದೆ, ಇವು ಮನುಷ್ಯನ ಐದು ಇಂದ್ರಿಯಗಳ ಕೆಲಸಗಳಾಗಿವೆ. | |
| | ಆ) ನಾಲಿಗೆ ರುಚಿಕೆಟ್ಟ ವಸ್ತುವನ್ನು ದೇಹದ ಒಳಕ್ಕೆ ಸೇರಿಸುವುದಿಲ್ಲ. ರುಚಿ ಮತ್ತು ಹಿತವಾಗಿದ್ದನ್ನು ಮಾತ್ರ ಒಳಕ್ಕೆ ಕಳಿಸುತ್ತದೆ. ಬೇಡವಾದದ್ದನ್ನು ಹೊಟ್ಟೆ ಹೊರದಬ್ಬಿದಾಗ ನಾಲಿಗೆ ಅದಕ್ಕೆ ಸಹಾಯ ಮಾಡುತ್ತದೆ. ಹೀಗೆ ದೇಹದ ಆರೋಗ್ಯ ಕಾಪಾಡುವಲ್ಲಿ ನಾಲಿಗೆ ಸಹಾಯಕವಾಗಿದೆ | |
| | ಪ್ರಬಂಧ ಬರವಣಿಗೆ (ಯಾವುದಾದರೂ ಒಂದಕ್ಕೆ ಮಾತ್ರ)<br>ಪೀಠಿಕೆ/ಪ್ರಸ್ತಾವನೆ<br>ವಿಷಯ ನಿರೂಪಣೆ<br>ಭಾಷಾ ಶೈಲಿಗೆ, ಮುಕ್ತಾಯ/<br>ಉಪಸಂಹಾರ<br>ಒಟ್ಟು | <br>1 ಅಂಕ<br>2 ಅಂಕಗಳು<br>1 ಅಂಕ<br><br>4 ಅಂಕಗಳು |
| **XII.** | 37. ಪರಿಸರ ಸಂರಕ್ಷಣೆ **ಅಥವಾ** ಗ್ರಂಥಾಲಯಗಳ ಮಹತ್ವ | **(1×4=4)** |
| **XIII.** | **ಪತ್ರ ಲೇಖನ ಬರೆಯುವುದು :(ಯಾವುದಾದರೂ ಒಂದಕ್ಕೆ ಮಾತ್ರ)** | **(1×5=5)** |
| 38. | ವ್ಯಾವಹಾರಿಕ ಪತ್ರ :<br>ಇಂದ ವಿಳಾಸ, ಗೆ ವಿಳಾಸ, ಸಂಬೋಧನೆ,<br>ವಿಷಯ<br>ಪತ್ರದ ಒಡಲು<br>ಸಹಿಯೊಂದಿಗೆ ಮುಕ್ತಾಯ, ಸ್ಥಳ, ದಿನಾಂಕ<br>ವಿನ್ಯಾಸ, ಪದಬಳಕೆ, ಶೈಲಿ<br>ಒಟ್ಟು<br>**ಅಥವಾ**<br>ವೈಯಕ್ತಿಕ ಪತ್ರ :<br>ಇಂದ ವಿಳಾಸ ಸ್ಥಳ, ದಿನಾಂಕ, ಪ್ರಾರಂಭದ ಒಕ್ಕಣೆ<br>ಪತ್ರದ ಒಡಲು<br>ಸಹಿಯೊಂದಿಗೆ ಮುಕ್ತಾಯ, ಗೆ ವಿಳಾಸ<br>ವಿನ್ಯಾಸ, ಪದ ಬಳಕೆ, ಶೈಲಿ<br>ಒಟ್ಟು | <br><br>1 ಅಂಕ<br>2 ಅಂಕಗಳು<br>1 ಅಂಕ<br>1 ಅಂಕ<br>5 ಅಂಕಗಳು<br><br><br>1 ಅಂಕ<br>2 ಅಂಕಗಳು<br>1 ಅಂಕ<br>1 ಅಂಕ<br>5 ಅಂಕಗಳು |